ಗ ಗಾ ಕೆ ಹಾಂಡಿಕ್ಕ್

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	965
ಮಾನ್ಯ ಸದಸ್ಯರ ಹೆಸರು	ಶ್ರೀ. ಆರ್. ಬಿ. ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ:	20.09.2021
ಉತ್ತರಿಸುವ ಸಚಿವರು	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕೋವಿಡ್ ಹಿನ್ನಲೆಯಲ್ಲಿ ರಾಜ್ಯದಲ್ಲಿ ಹೊಸದಾಗಿ ಕಾಣಿಸಿಕೊಂಡಿರುವ ಖಾಯಿಲೆಗಳಾವುವು; (ವಿವರಗಳನ್ನು ಒದಗಿಸುವುದು)	ಕೋವಿಡ್ ಹಿನ್ನಲೆಯಲ್ಲಿ ರಾಜ್ಯದಲ್ಲಿ ಹೊಸದಾಗಿ ಕಾಣಿಸಿಕೊಂಡಿರುವ ಖಾಯಿಲೆ ಕೋವಿಡ್ ಅಸೋಸಿಯೇಟೆಡ್ ಮ್ಯುಕೋರ್ ಮೈಕೋಸಿಸ್/ಬ್ಲಾಕ್ ಫಂಗಸ್.
ಆ	ಈ ಖಾಯಿಲೆಗಳಿಗೆ ಔಷಧಿಗಳ ಲಭ್ಯವಿದೆಯೇ;	ಕೋವಿಡ್ ಅಸೋಸಿಯೇಟೆಡ್ ಮ್ಯುಕೋರ್ ಮೈಕೋಸಿಸ್/ಬ್ಲಾಕ್ ಫಂಗಸ್ ಸೋಂಕಿನ ನಿರ್ದಿಷ್ಟ ಔಷಧಿ ಲಭ್ಯವಿದೆ.
ಇ	ಜನರ ಆರೋಗ್ಯ ದೃಷ್ಟಿಯಿಂದ ಕೈಗೊಳ್ಳುತ್ತಿರುವ ಆರೋಗ್ಯ ಸುರಕ್ಷಾ ಕ್ರಮಗಳೇನು?	ಮ್ಯುಕೋರ್ ಮೈಕೋಸಿಸ್ ಸೋಂಕಿನ ಚಿಕಿತ್ಸೆ ಹಾಗೂ ನಿರ್ವಹಣೆ ಕುರಿತಂತೆ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕ್ಲಿನಿಕಲ್ ತಜ್ಞರ ಸಮಿತಿಯ ಪರಿಷ್ಕೃತ ಶಿಫಾರಸ್ಸುಗಳನ್ನು **(Revised Recommendations of Clinical Expert Committee)** ಗಳನ್ವಯ ಮ್ಯುಕೋರ್ ಮೈಕೋಸಿಸ್ ಸೋಂಕಿನ ಚಿಕಿತ್ಸೆ ನೀಡುವ ಆಸ್ಪತ್ರೆಗಳಲ್ಲಿ ಈ ಕೆಳಕಂಡ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ. 1. ಮ್ಯುಕೋರ್ ಮೈಕೋಸಿಸ್ ಸೋಂಕು ಬರದಂತೆ ತಡೆಗಟ್ಟಲು ಕೋವಿಡ್-19 ಸೋಂಕಿಗೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ರೋಗಿಯ ವೈಯಕ್ತಿಕ ಸ್ವಚ್ಛತೆಯ ಪಾಲನೆಯ ಹಾಗೂ ಇತರ ಪೂರಕ ಕ್ರಮಗಳಾದ ಸ್ವಚ್ಛವಾದ ಮಾಸ್ಕ್ ಹಾಗೂ ಪಿ ಪಿ ಈ ಕಿಟ್ ಗಳ ಬಳಕೆ ಇತ್ಯಾದಿಗಳನ್ನು ಪಾಲಿಸುವುದು. 2. ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರವು ನಿಗದಿ ಪಡಿಸಿರುವ ಚಿಕಿತ್ಸಾ ಶಿಷ್ಟಾಚಾರದ ಕಡ್ಡಾಯ ಪಾಲನೆ. 3. ಸ್ಟಿರಾಯ್ಡ್ ಗಳ ವಿವೇಚನಾಯುತ ಬಳಕೆ, ಆಕ್ಸಿಜನ್ ಸಿಲಿಂಡರ್, ಪೈಪಿಂಗ್ ಹಾಗೂ ವೆಂಟಿಲೇಟರ್ ಸರ್ಕ್ಯೂಟ್‌ನ ಸ್ವಚ್ಛತೆ ಮತ್ತು ಹ್ಯೂಮಿಡಿಫೈಯರ್ ನಲ್ಲಿ ಶುದ್ಧ ನೀರಿನ **(sterile water)** ಬಳಕೆ ಮಾಡುವುದು. 4. ಕೋವಿಡ್ ಆಸ್ಪತ್ರೆಯ ಆವರಣದಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳದಿರುವುದು. 5. ಕೋವಿಡ್ ವಾರ್ಡ್ನ ಒಳಗೆ ರೋಗಿಯ ಸಂಬಂಧಿಕರ ಓಡಾಟವನ್ನು ನಿರ್ಬಂಧಿಸುವುದು ಹಾಗೂ ಪ್ರತಿ ಶಿಫ್ಟ್ ನಲ್ಲಿಯೂ ಸೋಂಕುನಿವಾರಕ ದ್ರಾವಣದಿಂದ ನೆಲದ ಸ್ವಚ್ಛತೆ, ರೋಗಿಯ ಸುತ್ತ-ಮುತ್ತ ಸ್ವಚ್ಛಗೊಳಿಸುವುದು. 6. ಕೋವಿಡ್‌ನಿಂದ ಗುಣಮುಖನಾದ ವ್ಯಕ್ತಿಯು ಆಸ್ಪತ್ರೆಯಿಂದ ಡಿಸ್ಚಾರ್ಜ್ ಹೊಂದುವ ಸಂದರ್ಭದಲ್ಲಿ

		ಮ್ಯುಕೋರ್ ಮೈಕೋಸಿಸ್ ಲಕ್ಷಣಗಳ ಕುರಿತು ಮಾಹಿತಿ ನೀಡುವುದು. ಹಾಗೂ ಸೌಮ್ಯ ಸ್ವರೂಪದ ಲಕ್ಷಣಗಳಿದ್ದರೂ ಸಹ ಸ್ವಯಂ ವೈದ್ಯ **(self Medication)** ಪದ್ಧತಿಯನ್ನು ಪಾಲಿಸದೆ, ಮ್ಯುಕೋರ್ ಮೈಕೋಸಿಸ್‌ನ ಲಕ್ಷಣಗಳು ಕಂಡ ತಕ್ಷಣವೇ ವೈದ್ಯರ ಸಲಹೆಗಳನ್ನು ಪಡೆದು ಪಾಲಿಸುವುದು. 7. ಅನಿಯಂತ್ರಿತ ಮಧುಮೇಹ, ಇತರ ಆರೋಗ್ಯ ಸಮಸ್ಯೆಗಳು, ಇಮ್ಯುನೋಕಾಂಪ್ರುಮೈಸ್ಡ್ ಲಕ್ಷಣಗಳಿದ್ದಲ್ಲಿ ಕಡ್ಡಾಯವಾಗಿ ವೈದ್ಯರಿಗೆ ಮಾಹಿತಿ ನೀಡುವುದು, ಇತ್ಯಾದಿ ವಿಷಯಗಳ ಕುರಿತು ಸಲಹೆಯನ್ನು ನೀಡುವುದು. ಇದೇ ಅಲ್ಲದೇ, ಮ್ಯುಕೋರ್ ಮೈಕೋಸಿಸ್ ಬರದಂತೆ ನಿಯಂತ್ರಿಸುವಲ್ಲಿ ಸಮುದಾಯದ ಮಟ್ಟದಲ್ಲಿ ಈ ಕೆಳಕಂಡ ಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. 1. ವಿವಿಧ ಮಾಧ್ಯಮಗಳ ಮೂಲಕ ವ್ಯಾಪಕ ಆರೋಗ್ಯ ಶಿಕ್ಷಣವನ್ನು ನೀಡುವುದರ ಮೂಲಕ ನಿಯಂತ್ರಣ ಸಾರ್ವಜನಿಕರು ಅನಗತ್ಯವಾಗಿ ಭಯ ಪಡದೆ, ಸರಳ ನಿಯಂತ್ರಣ ಕ್ರಗಳನ್ನು ಪಾಲಿಸುವಂತೆ ಅರಿವು ಮೂಡಿಸಲಾಗಿದೆ. 2. ಸರಿಯಾದ ಕ್ರಮದಲ್ಲಿ ಮಾಸ್ಕ್ ಧರಿಸುವುದು. ಒಂದೇ ಮಾಸ್ಕ್ ಅನ್ನು ಬಹಳ ದಿನಗಳವರೆಗೆ ಬಳಸದಿರುವುದು. ಎನ್ 95 ಮಾಸ್ಕ್ ಆದಲ್ಲಿ 8 ಗಂಟೆಗಳ ಕಾಲ ಬಳಕೆಯ ನಂತರ ವಿಲೇವಾರಿ ಮಾಡುವುದು. ಬಟ್ಟೆಯಿಂದ ಮಾಡಿದ ಮಾಸ್ಕ್ ಧರಿಸುತ್ತಿದ್ದಲ್ಲಿ, ಪ್ರತಿದಿನ ಸ್ವಚ್ಛಗೊಳಿಸಿ, ಬಿಸಿಲಿನಲ್ಲಿ ಒಣಗಿಸಿ ಧರಿಸುವುದು. 3. ಮಾಸ್ಕ್ ಹಾಗೂ ಮುಖವನ್ನು ಮುಟ್ಟಿಕೊಳ್ಳದಿರುವುದು. 4. ಸ್ಟಿರಾಯ್ಡ್ ಹಾಗೂ ಆಂಟಿ ಬಯಾಟಿಕ್ ಬಳಸಿ , ಸ್ವಯಂ ವೈದ್ಯ ಪದ್ಧತಿಯನ್ನು ಪಾಲಿಸದಿರುವುದು. 5. ಹಬೆ ತೆಗೆದುಕೊಳ್ಳದಿರುವುದು, ಅದರಲ್ಲೂ ವಿಶೇಷವಾಗಿ ಮ್ಯುಕೋರ್ ಮೈಕೋಸಿಸ್ ಲಕ್ಷಣಗಳನ್ನು ಹೊಂದಿರುವವರು. 6. ಆಕ್ಸಿಜನ್ ಸಾಂದ್ರಕಗಳಲ್ಲಿ ಶುದ್ಧ ನೀರಿನ **(Sterile Water)** ಬಳಕೆ ಮಾಡುವುದು ಹಾಗೂ ಪ್ರತಿ ಬಾರಿ ಸಾಂದ್ರಕಗಳ ಬಳಕೆಯ ನಂತರ ಸ್ಯಾನಿಟೈಸ್ ಮಾಡುವುದು. 7. ಕಛೇರಿ ಹಾಗೂ ಮನೆಗಳಲ್ಲಿರುವ ನಿಯಂತ್ರಕಗಳನ್ನು ಸ್ಯಾನಿಟೈಸ್ ಮಾಡುವುದು. 8. ಜೈವಿಕ ತ್ಯಾಜ್ಯಗಳನ್ನು ಮನೆಯ ಒಳಗೆ ಸಂಗ್ರಹಿಸದಿರುವುದು ಹಾಗೂ ಕಡ್ಡಾಯವಾಗಿ ಪ್ರತಿದಿನ ವಿಲೇವಾರಿ ಮಾಡುವುದು. 9. ಕೋವಿಡ್ 19 ನಿಯಂತ್ರಣದ ಸಾಮಾನ್ಯ ಶಿಷ್ಟಾಚಾರ ಕ್ರಮಗಳಾದ ದೈಹಿಕ ಅಂತರದ ಪಾಲನೆ, ಕೈಗಳ ಸ್ವಚ್ಛತೆ, ಮಾಸ್ಕ್ ಧರಿಸುವುದು ಹಾಗೂ ಸಂದಣಿಯ ಸ್ಥಳಗಳಿಂದ ದೂರವಿರುವುದು, ಇತ್ಯಾದಿಗಳನ್ನು ಕಡ್ಡಾಯವಾಗಿ ಪಾಲಿಸುವುದು.

		10. ಸಾಧ್ಯವಾದಷ್ಟು ಆಸ್ಪತ್ರೆಗಳು ಹಾಗೂ ಜನಸಂದಣಿಯ ಸ್ಥಳಗಳಿಂದ ದೂರವಿರುವುದು.

ಆಕುಕ 138 ಆಕುಕ ಎಸ್‌ಎಂಎಂ 2021

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು